**ಕರ್ನಾಟಕ ಸರ್ಕಾರ**
**ಕರ್ನಾಟಕ ವಿಧಾನ ಪರಿಷತ್ತು**
**146ನೇ ಅಧಿವೇಶನ-2022**

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1035(1168) |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಎಸ್. ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ಸಚಿವರು | : | ಮಾನ್ಯ ಉನ್ನತ ಶಿಕ್ಷಣ ಸಚಿವರು |
| ಉತ್ತರಿಸಬೇಕಾದ ದಿನಾಂಕ | : | 07.03.2022 |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಬೆಂಗಳೂರು ವಿಶ್ವವಿದ್ಯಾನಿಲಯ ಜ್ಞಾನಭಾರತಿ ಆವರಣದಲ್ಲಿ ವಿಶ್ವವಿದ್ಯಾನಿಲಯದ ಉಪಯೋಗಕ್ಕಾಗಿ ಸರ್ಕಾರವು ಮಂಜೂರು ಮಾಡಿರುವ ಭೂಮಿ ಎಷ್ಟು; ಈ ಭೂಮಿಯನ್ನು ಯಾವಾಗ ಮಂಜೂರು ಮಾಡಲಾಗಿದೆ; (ಆದೇಶಗಳು ಸಹಿತ ಸಂಪೂರ್ಣ ವಿವರ ನೀಡುವುದು) | 1965ನೇ ಸಾಲಿನಿಂದ ಬೆಂಗಳೂರು ವಿಶ್ವವಿದ್ಯಾಲಯಕ್ಕಾಗಿ ಸರ್ಕಾರದ ಕೆಳಕಂಡ ಆದೇಶಗಳನ್ವಯ ಒಟ್ಟು 1112.04 ಎಕರೆ ಜಮೀನನ್ನು ಮಂಜೂರು ಮಾಡಲಾಗಿದೆ/ ಸ್ವಾಧೀನ ಪಡಿಸಿಕೊಳ್ಳಲಾಗಿದೆ.<br>**ಕ್ರ. ಸಂ** — **ಸರ್ಕಾರದ ಆದೇಶ/ಅಧಿಸೂಚನೆ ಸಂಖ್ಯೆ ಮತ್ತು ದಿನಾಂಕ**<br>1 — ಆದೇಶ ಸಂ:AFD 105 FGN 64, ದಿನಾಂಕ:18.11.1965<br>2 — ಆದೇಶ ಸಂ:RD 46 LED 63, ದಿನಾಂಕ:23.04.1966<br>3 — ಅಧಿಕೃತ ಜ್ಞಾಪನ ಸಂಖ್ಯೆ:B.Di SI.LND.(3)SR1.3317/71-72, ದಿನಾಂಕ:27.05.1974<br>4 — Notification No:LAC 85/66-67 to 156/66-67 and LAC 349/68-69 to 396/68-69, LAC 2827/76-77 and 464/68-69 to 484/68-69 and LAC 1076/69-70, ದಿನಾಂಕ;08.09.1977 |
| (ಆ) | 2010ರಲ್ಲಿ ಜ್ಞಾನಭಾರತಿ ಆವರಣದಲ್ಲಿರುವ ಭೂಮಿಯು ಸರ್ವೆ ಕಾರ್ಯ ನಡೆದಿದ್ದು, ಈ ಸರ್ವೆಯ ಪ್ರಕಾರ ಎಷ್ಟು ವಿಸ್ತೀರ್ಣದ ಭೂಮಿ ಒತ್ತುವರಿಯಾಗಿದೆ; (ಆದೇಶಗಳ ಸಹಿತ ಸಂಪೂರ್ಣ ವಿವರ ನೀಡುವುದು) | ಬೆಂಗಳೂರು ವಿಶ್ವವಿದ್ಯಾಲಯದ ಒಟ್ಟಾರೆ ಜಮೀನಿನ ಪೈಕಿ 12 ಎಕರೆ 30.25 ಗುಂಟೆ ವಿಸ್ತೀರ್ಣದ ಜಮೀನನ್ನು ಒತ್ತುವರಿ ಮಾಡಿಕೊಳ್ಳಲಾಗಿತ್ತು. ಈ ಪೈಕಿ 9 ಎಕರೆ 08 ಗುಂಟೆ ಜಮೀನಿನ ಒತ್ತುವರಿಗೆ ಸಂಬಂಧಿಸಿದಂತೆ ದಾಖಲಿಸಲಾಗಿದ್ದ ನ್ಯಾಯಿಕ ಪ್ರಕರಣಗಳಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಪರವಾಗಿ ತೀರ್ಮಾನವಾಗಿದ್ದು, ಒತ್ತುವರಿ ತೆರವುಗೊಳಿಸುವ ಪ್ರಕ್ರಿಯೆ ಜಾರಿಯಲ್ಲಿರುತ್ತದೆ. |
| (ಇ) | ಜ್ಞಾನಭಾರತಿ ಆವರಣದಲ್ಲಿ ಒತ್ತುವರಿಯಾಗಿರುವ ಎಷ್ಟು ಭೂಮಿಯನ್ನು ಇಲ್ಲಿಯವರೆಗೆ | |

| | | |
|---|---|---|
| | ಹಿಂಪಡೆಯಲಾಗಿದೆ ಹಾಗೂ ಬಾಕಿ ಒತ್ತುವರಿ ಭೂಮಿಯನ್ನು ಹಿಂಪಡೆಯುವ ಕಾರ್ಯವು ಯಾವ ಹಂತದಲ್ಲಿದೆ; ಈ ಭೂಮಿಯನ್ನು ಅಕ್ರಮವಾಗಿ ಒತ್ತುವರಿ ಮಾಡಿಕೊಂಡಿರುವವರ ವಿರುದ್ಧ ಸರ್ಕಾರವು ಕೈಗೊಂಡಿರುವ ಕ್ರಮಗಳೇನು? (ಆದೇಶಗಳ ಸಹಿತ ಸಂಪೂರ್ಣ ವಿವರ ನೀಡುವುದು) | ಬಾಕಿ ಉಳಿದ 3 ಎಕರೆ 22.25 ಗುಂಟೆ ವಿಸ್ತೀರ್ಣದ ಜಮೀನಿನ ಒತ್ತುವರಿ ತೆರವುಗೊಳಿಸಲು ಸಕ್ಷಮ ನ್ಯಾಯಾಲಯಗಳಲ್ಲಿ ಮೊಕದ್ದಮೆಗಳನ್ನು ದಾಖಲಿಸಲಾಗಿದ್ದು, ಪ್ರಕರಣಗಳು ವಿಚಾರಣಾಧೀನವಾಗಿರುತ್ತವೆ.<br><br>ಒತ್ತುವರಿದಾರರ ವಿವರಗಳು ಹಾಗೂ ಒತ್ತುವರಿಗೆ ಸಂಬಂಧಿಸಿದಂತೆ ವಿರುದ್ಧ ದಾಖಲಿಸಲಾಗಿರುವ ನ್ಯಾಯಿಕ ಪ್ರಕರಣಗಳ ಹಾಗೂ ಸದರಿ ಪ್ರಕರಣಗಳ ಪ್ರಸ್ತುತ ಹಂತದ ವಿವರಗಳನ್ನು ಅನುಬಂಧ-1 ರಲ್ಲಿ ಒದಗಿಸಲಾಗಿದೆ |

**ಸಂಖ್ಯೆ: ಇಡಿ/119 /ಯುಬಿವಿ /2022**

**(ಡಾ|| ಅಶ್ವತ್ ನಾರಾಯಣ ಸಿ.ಎನ್.)**

ಉನ್ನತ ಶಿಕ್ಷಣ, ಐಟಿ ಮತ್ತು ಬಿಟಿ ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಸಚಿವರು.

## ಅನುಬಂಧ-1

### ಚುಕ್ಕೆ ಗುರುತಿಲ್ಲದ ಪ್ರಶ್ನೆಸಂಖ್ಯೆ: 1035(1168)

| ಕ್ರ.ಸಂ | ಒತ್ತುವರಿ ಜಮೀನು ಸ್ಥಿತವಾಗಿರುವ ಬೆಂಗಳೂರು ವಿಶ್ವವಿದ್ಯಾಲಯದ ಪ್ರದೇಶ | ಸರ್ವೆ ನಂ | ಒತ್ತುವರಿ ಪ್ರಮಾಣ | ಒತ್ತುವರಿ ಮಾಡಿಕೊಂಡಿರುವ ವ್ಯಕ್ತಿ/ಸಂಸ್ಥೆಯ ವಿವರ | ನ್ಯಾಯಿಕ ಪ್ರಕರಣ ಸಂಖ್ಯೆ | ಪ್ರಕರಣದ ಪ್ರಸ್ತುತ ಹಂತ |
|---|---|---|---|---|---|---|
| 1 | ಮಲ್ಲತಹಳ್ಳಿ | 32 | 1.00 ಎಕರೆ | ಕನ್ಯಾಕುಮಾರಿ ವಿದ್ಯಾಸಂಸ್ಥೆ | ಅಸಲು ದಾವೆ ಸಂ:886/2013 | ಸಿಟಿ ಸಿವಿಲ್ ನ್ಯಾಯಾಲಯದಲ್ಲಿ ಇತ್ಯರ್ಥಕ್ಕಾಗಿ ಬಾಕಿ ಇರುತ್ತದೆ |
| 2 | ಮಲ್ಲತಹಳ್ಳಿ | 30 | 2.20 ಎಕರೆ | ಪಾಂಚಜನ್ಯ ವಿದ್ಯಾಪೀಠ ಕ್ಷೇಮಾಭಿವೃದ್ಧಿ ಟ್ರಸ್ಟ್ | RFA : 1355/2010 | ಉಚ್ಚ ನ್ಯಾಯಾಲಯದಲ್ಲಿ ಇತ್ಯರ್ಥಕ್ಕಾಗಿ ಬಾಕಿ ಇರುತ್ತದೆ |
| 3 | ಮಲ್ಲತಹಳ್ಳಿ | 32 | 0.1 1/4 ಗುಂಟೆ | ಭ್ರಮರಾಂಭಾ ಫ್ಯೂಯಲ್ ಸ್ಟೇಷನ್ | ಅಸಲು ದಾವೆ ಸಂ:7514/2013 | ಸಿಟಿ ಸಿವಿಲ್ ನ್ಯಾಯಾಲಯದಲ್ಲಿ ಇತ್ಯರ್ಥಕ್ಕಾಗಿ ಬಾಕಿ ಇರುತ್ತದೆ |
| | | | 0.1 ಗುಂಟೆ | ಶ್ರೀಮತಿ ನಾಗಮ್ಮ | | |